# 6ಸಿ - ಗುಣಾತ್ಮಕ ಶಿಕ್ಷಣಕ್ಕಾಗಿ ರಚನಾತ್ಮಕ ಚಟುವಟಿಕೆಗಳು (ಸಿಸಿಇ ಚಟುವಟಿಕೆಗಳ ನಿರ್ವಹಣೆಗಾಗಿ ಶಾಲಾ ವಿಶೇಷ ಫಲಿತಾಂಶಮುಖಿ ಕಾರ್ಯಕ್ರಮಗಳು)

## ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ಕೈಗೊಳ್ಳಬಹುದಾದ ಕಾರ್ಯತಂತ್ರಗಳು

**01.ಶಾಲೆಯ ಶೈಕ್ಷಣಿಕ ಗುಣಮಟ್ಟ ಸುಧಾರಣೆ:-** ಪ್ರತಿ ವರ್ಷದ ಶೈಕ್ಷಣಿಕ ವರ್ಷವು ಸಹಜವಾದರೂ ಕಲಿಕಾರ್ಥಿಗಳು ಮತ್ತು ಬೋಧನಾಂಶಗಳ ಅನುಷ್ಠಾನ, ಶೈಕ್ಷಣಿಕ ಪ್ರಗತಿ ಸಾಧನೆ ಅದರಲ್ಲೂ ಗುಣಮಟ್ಟದ ಶಿಕ್ಷಣ ಪೂರೈಕೆಯೊಂದಿಗೆ ವಿದ್ಯಾರ್ಥಿಗಳಲ್ಲಿ ಕಲಿಕಾ ನಿರಂತರತೆ ಕಾಯ್ದುಕೊಂಡು ಪೋಷಕರ ನಿರೀಕ್ಷಿತ ಪ್ರಗತಿ ಸಾಧಿಸುವುದು ಪ್ರತಿಯೊಬ್ಬ ಬೋಧಕರಿಗೆ ಸವಾಲಿನ ಸಂಗತಿಯೇ ಆಗಿದೆ. ಪ್ರಯುಕ್ತ ಪ್ರತಿ ಶಾಲೆ, ಪ್ರತಿ ತರಗತಿ, ಪ್ರತಿಯೊಬ್ಬ ಶಿಕ್ಷಕ/ಶಿಕ್ಷಕಿಯೂ ಸಹ ವಿಭಿನ್ನವಾಗಿ ಚಿಂತನೆ ಮಾಡುವುದು. ಪ್ರಯೋಗಶೀಲತೆಯಿಂದ ಯೋಜಿಸುವುದು ಅನಿವಾರ್ಯವಾಗಿದೆ. ಅದರಂತೆ ವಾರ್ಷಿಕ ಯೋಜನೆ ರೂಪಿಸಿ ಕಾರ್ಯೋನ್ಮುಖರಾಗಬೇಕಾಗಿದೆ.

**02.ವಾರ್ಷಿಕ ವಿಜ್ಞಾನ ಪ್ರಯೋಗ ಯೋಜನೆ:-** ಪ್ರತಿ ಶಾಲೆಯಲ್ಲಿ ವಾರ್ಷಿಕ ವಿಜ್ಞಾನ ಪ್ರಯೋಗ ನಿರ್ವಹಣಾ ಹಂಚಿಕೆ, ಕ್ರಿಯಾ ಯೋಜನೆ ರಚಿಸಿ ಅದರಲ್ಲಿ ಪ್ರತಿ ಮಾಹೆ/ವಾರದಲ್ಲಿ ಮಾಡಬಹುದಾದ ಪ್ರಯೋಗಗಳ ಕುರಿತ ತರಗತಿ ಫಲಕದಲ್ಲಿ ಪ್ರಕಟಿಸುವು .

**03.ಪ್ರಾಜೆಕ್ಟ್ ವರ್ಕ್ಸ್ ಪ್ರದರ್ಶನ:-** ಉತ್ತಮವಾಗಿ ರೂಪಿಸಿದ ಪ್ರಾಜೆಕ್ಟ್ ವರ್ಕ್‌ಗಳ ಕುರಿತು ಪ್ರಶಂಸಿಸಿ ಪ್ರದರ್ಶಿಸುವುದು (ಪ್ರಾಜೆಕ್ಟ್ ಪ್ರದರ್ಶಿಸುವ ಸ್ಥಳ ನಿಗದಿಪಡಿಸಿ ಬದಲಾಯಿಸುತ್ತಿರಬೇಕು).

**04.**<u>ಗಣಿತ ಮತ್ತು ಭಾಷೆಗೆ</u> ಸಂಬಂಧಿಸಿದಂತೆ ಮೂಲ ಪರಿಕಲ್ಪನೆಗಳು, ವ್ಯಾಕರಣಾಂಶಗಳ ಕುರಿತು ಚಾರ್ಟ್‌ಗಳನ್ನು ರಚಿಸಿ ತರಗತಿಯಲ್ಲಿ ಪ್ರದರ್ಶಿಸುವುದು ಮತ್ತು ದಿನನಿತ್ಯ ವಿದ್ಯಾರ್ಥಿಗಳು ನೋಡಿ ಕಲಿಯುವಂ ಗಲಿ. ನಲಿ-ಕಲಿ ಕಾರ್ಡ್‌ಗಳು ವಾಚಕ, ಪ್ರಗತಿನೋಟ, ಪೊಪೆಟ್ ಶೋ ಇತ್ಯಾದಿಗಳನ್ನು ಬಳಸಿಕೊಂಡು ಚಟುಚಟಿಕೆ ಆಧಾರಿತ ಬೋಧನೆ ನಿರ್ವಹಿಸುವುದು.

**05.ವಿಷಯವಾರು ಶಿಕ್ಷಕರ ನೇಮಕ:-** 4 ಮತ್ತು 5ನೇ ತರಗತಿಗಳಿಗೆ ಮತ್ತು 6 ಹಾಗೂ 7/8ನೇ ತರಗತಿಗಳಿಗೆ ವಿಷಯವಾರು ಬೋಧನೆಗೆ [ಪ್ರೌಢಶಾಲೆಗಳಂತೆ] ಲಭ್ಯ ಶಿಕ್ಷಕರಿಗೆ ಜವಾಬ್ದಾರಿ ಹಂಚಿಕೆ ಮಾಡಿ ಭಾಷೆ ವಿಷಯಗಳನ್ನು ಹೆಚ್ಚುವರಿಯಾಗಿ ನೀಡಿ ವಿಷಯವಾರು ಬೋಧನೆಗೆ ಬಲಪಡಿಸುವುದು (**ಉದಾ:** 6, 7 ಮತ್ತು 8ನೇ ತರಗತಿಗಳಿಗೆ ತಲಾ ಒಬ್ಬರಿಗೆ ಗಣಿತ+ಇಂಗ್ಲೀಷ್, ಸಮಾಜ+ಕನ್ನಡ, ವಿಜ್ಞಾನ+ಹಿಂದಿ ಜಿ.ಪಿ.ಟಿ ಶಿಕ್ಷಕರು ಲಭ್ಯವಿಲ್ಲದ ಕಡೆ] ಇದರಿಂದಾಗಿ ಎಲ್ಲಾ ತರಗತಿಗಳಿಗೆ <u>ಒಂದು ವಿಷಯವನ್ನು ಒಬ್ಬರೇ ಬೋಧಿಸುವುದರಿಂದ ವಿಷಯದ ಪ್ರಭುತ್ವ ಇರುತ್ತದೆ.</u>

**06.ವಿದ್ಯಾರ್ಥಿ ಸ್ನೇಹಿ ಕಲಿಕೆ:-** ತರಗತಿ ಬೋಧನೆ ನಿರಂತರ ಮತ್ತು ಕ್ರಿಯಾಶೀಲವಾಗಿರಲು ಸೃಜನ ಶೀಲತೆಯಿಂದ ಚಿಂತನೆ ಮಾಡಿ ಹೊಸ ಹೊಸ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವುದು. (**ಉದಾ:** ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ, ರಸಪ್ರಶ್ನೆ, ಸಂವಾದ, ಚರ್ಚೆ ನಿರ್ವಹಿಸುವುದಕ್ಕೆ ಅವಕಾಶ ನೀಡುವುದು).

**07.**ಮಕ್ಕಳ ಕಲಿಕಾ ಗ್ರೇಡಿಂಗ್ ಆಧರಿಸಿ ಅನುಪಾಲನೆ ಮಾಡುವುದು. ಮತ್ತು ಸ್ಪಷ್ಟ ಓದು, ಶುದ್ಧಬರಹ, ಸರಳ ಲೆಕ್ಕಾಚಾರಗಳನ್ನು ಪ್ರೋತ್ಸಾಹಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

**08.ನಲಿಕಲಿ ಪರಿಣಾಮಕಾರಿ ಅನುಷ್ಠಾನ:-** ನಲಿ-ಕಲಿ ಅನುಷ್ಠಾನ ಸಂಬಂಧ ಹೆಚ್ಚಿನ ಆಸಕ್ತಿಯಿಂದ ಪೂರಕ ಬೋಧನಾ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಬೋಧಿಸುವುದು. (ಕಡ್ಡಾಯವಾಗಿ

ವಿದ್ಯಾರ್ಥಿಗಳ ಸಂಖ್ಯೆ ತರಗತಿಗೆ ಗರಿಷ್ಠ 25 ಇರಲಿ) ಎಲ್ಲಾ ಕಾರ್ಯಾಗಾರಗಳಲ್ಲಿ ಪಡೆದಿರುವ ತರಬೇತಿಗಳನ್ನು ಆಧರಿಸಿ ಪರಿಣಾಮಕಾರಿಯಾಗಿ ನಲಿ-ಕಲಿ ಅನುಷ್ಠಾನಗೊಳಿಸುವುದು.

**09. ಸಿ.ಸಿ.ಇ ಚಟುವಟಿಕೆಗಳ ನಿರ್ವಹಣೆ:-** ಸಿ.ಸಿ.ಇ. ಯಶಸ್ವಿ ಅನುಷ್ಠಾನಕ್ಕಾಗಿ ವರ್ಷದ ಪ್ರಾರಂಭದಲ್ಲಿಯೇ ವಿಷಯವಾರು ಪಾಠಗಳನ್ನು ಆಧರಿಸಿ ಆಯಾ ತರಗತಿವಾರು ಚಟುವಟಿಕೆಗಳನ್ನು (ಪ್ರಾಜೆಕ್ಟ್ ವರ್ಕ್ಸ್) ಗಳನ್ನು ಹಂಚಿಕೆ ಮಾಡಿ ಪ್ರಕಟಿಸುವುದು ಮತ್ತು ಅನುಸರಣೆ ಮಾಡುವುದು. (ಉಲ್ಲೇಖಿತ ಸುತ್ತೋಲೆಯೊಂದಿಗೆ ಅನುಬಂಧಿಸಿರುವ ಚಟುವಟಿಕೆ ಬ್ಯಾಂಕ್ ಗಮನಿಸುವುದು)

## ಗುಣಾತ್ಮಕ ಶಿಕ್ಷಣಕ್ಕಾಗಿ ಶಾಲಾ ವಿಶೇಷ ಕಾರ್ಯಕ್ರಮಗಳು [School Special Programmes for Quality Education]

ಪ್ರತಿ ಶಾಲೆಯೂ ಸಹ ವಿಭಿನ್ನ ಮತ್ತು ಪ್ರಾದೇಶಿಕವಾಗಿ ತನ್ನದೇ ಆದ ವೈಶಿಷ್ಟ್ಯ ಹೊಂದಿರುತ್ತದೆ ಹಾಗೂ ಶಿಕ್ಷಕವೃಂದ/ಎಸ್.ಡಿ.ಎಂ.ಸಿ/ ಸಮೂದಾಯ ಸಹ ಸೃಜನಶೀಲರಾಗಿದ್ದಾರೆ. ಕಾರಣ ಶಾಲೆಯಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಿಸುವ ಹಲವಾರು ರಚನಾತ್ಮಕ ಆವಿಷ್ಕೃತ [Innovative] ಚಟುವಟಿಕೆಗಳನ್ನು ಅಳವಡಿಸಿ ಮುಂದುವರೆಯುತ್ತಿರುವ ಶಾಲೆಗಳಿವೆ. ಅಂತಹ ಕೆಲವು ವಿಶೇಷತೆಗಳನ್ನು ಕೆಲವು ಶಾಲೆಗಳಲ್ಲಿ ಅಳವಡಿಸಿರುವುದನ್ನು ಗುರುತಿಸಿ ಸಲಹಾತ್ಮಕವಾಗಿ ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಕೆಳಕಂಡಂತೆ ದಾಖಲಿಸಿದೆ.

**ಶಾಲಾ ವಿಶೇಷತೆಗಳು:-** ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಸ್ಥಳೀಯ ಮಾನವ ಸಂಪನ್ಮೂಲ ಮತ್ತು ಭೌತಿಕ ಸಂಪನ್ಮೂಲವನ್ನು ಆಧರಿಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಉದಾ:-ಖಗೋಳ ದರ್ಶನ, ಮಕ್ಕಳ ಹಬ್ಬ, ಕ್ರಾಫ್ಟ್‌ನಲ್ಲಿ ತರಬೇತಿ, ಹೊರಸಂಚಾರ, ಯೋಗ, ಚಿತ್ರಕಲೆ, ಸಂಗೀತ, ಕೈತೋಟ, ಅಕ್ಷರ ವನ, ಇ-ಕಲಿಕಾ ಕೇಂದ್ರ ನಿರ್ಮಾಣ ಇತ್ಯಾದಿಗಳನ್ನು ಅಳವಡಿಸಿ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಿದ ಕೆಲವು ಉದಾಹರಣೆಗಳು ಕೆಳಕಂಡಂತಿದೆ.

1. **ಸ್ಪೋಕನ್ ಇಂಗ್ಲೀಷ್:-** How to make English easy : ಪ್ರಸ್ತುತ ಗ್ರಾಮೀಣ ಪ್ರದೇಶಗಳಲ್ಲಿ ಇಂಗ್ಲೀಷ್ ಕಲಿಕೆ ಒಂದು ಸವಾಲಾಗಿರುವ ಪ್ರಯುಕ್ತ (ಬಹುತೇಕ ಪಿ.ಯು.ಸಿ ವಿಜ್ಞಾನ ವ್ಯಾಸಂಗದ ನಂತರ J.E.E., N.E.E.T., C.E.T ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧಿಸುವುದು ಸವಾಲಾಗುತ್ತದೆ) ವಿದ್ಯಾರ್ಥಿಗಳು ಇಂಗ್ಲೀಷ್‌ನಲ್ಲಿ ಮಾತನಾಡಲು ಕಲಿಯುವಂತೆ ಸಹಾಯಕವಾಗಬಲ್ಲ ಸ್ಪೋಕನ್ ಇಂಗ್ಲಿಷ್ ಕೈಪಿಡಿಯನ್ನು ಜಿ.ಪಿ.ಟಿ ಆಂಗ್ಲ ಭಾಷಾ ಶಿಕ್ಷಕರ ಸಂಪನ್ಮೂಲ ತಂಡ ತಯಾರಿಸುವುದು. ಇದರಲ್ಲಿ ವಿದ್ಯಾರ್ಥಿಗಳಿಗೆ conversation, dialogues, script, role play, story telling, situation explanation, experience sharing ನಂತಹ ಚಟುವಟಿಕೆಗಳನ್ನು ಅಳವಡಿಸಿದ ಸಾಹಿತ್ಯವನ್ನು 40 ನಿಮಿಷದ ಬೋಧನಾವಧಿಗೆ ತಲಾ ಒಂದು ಚಟುಚಟಿಕೆಯಂತೆ ರಚಿಸಿ ಕಡ್ಡಾಯವಾಗಿ ವಾರದಲ್ಲಿ ಒಂದು ಅವಧಿ (ಪ್ರತಿ ಶನಿವಾರದ ಮೂರನೆಯ ಅವಧಿ ಆಂಗ್ಲ ಭಾಷೆ ಹೊರತುಪಡಿಸಿ ಇತರ ಭಾಷೆಯಲ್ಲಿ ಮಾತನಾಡದಂತೆ ನಿರ್ಣಯಿಸಿಕೊಂಡು ಸಂಪೂರ್ಣ ಒಂದು ಅವಧಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಆಂಗ್ಲ ಭಾಷೆಯಲ್ಲಿ ಮಾತನಾಡುತ್ತಾ) ಸ್ಪೋಕನ್ ಇಂಗ್ಲಿಷ್ ತರಗತಿಗಳನ್ನು ಶಾಲೆಯ ಶಿಕ್ಷಕರಿಂದಲೇ ನಡೆಸುವುದು. ಅಗತ್ಯ ಮತ್ತು ಅವಕಾಶಗಳಿದ್ದಲ್ಲಿ ಬಾಹ್ಯವಾಗಿಯೂ ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳಬಹುದು.
   - ಮೀನಾ ಕ್ಲಬ್ ಮುಖಾಂತರ ವಿದ್ಯಾರ್ಥಿಗಳ ತಂಡವನ್ನು ರಚಿಸಿ ಶಾಲೆಯ ಸಂದರ್ಶನಾರ್ಥಿಗಳಿಗೆ ಶಾಲೆಯ ಕುರಿತು ಸಮಗ್ರವಾಗಿ ಆಂಗ್ಲ ಭಾಷೆಯಲ್ಲಿ ಪರಿಚಯಿಸುವುದನ್ನು ಕಲಿಸುವುದು.
   - ಕಾರ್ಯಕ್ರಮಗಳಲ್ಲಿ ನಿರೂಪಣೆಯನ್ನು ವಿದ್ಯಾರ್ಥಿಗಳಿಂದಲೇ ಆಂಗ್ಲ ಭಾಷೆಯಲ್ಲಿ ನಿರ್ವಹಿಸುವುದನ್ನು ಕಲಿಸುವುದು.

- ಎಲ್.ಕೆ.ಜಿ ಯಿಂದ ನಲಿ-ಕಲಿ ತರಗತಿಗಳಿಗೆ ವಿವಿಧ ರೀತಿಯ ಚಾರ್ಟ್‌ಗಳನ್ನು ಫ್ಲೆಕ್ಸ್ ನಲ್ಲಿ ರಚಿಸಿ (**ಉದಾ:-** ಮಾನವನ ಶರೀರದ ಭಾಗಗಳು, ಹಣ್ಣುಗಳು, ತರಕಾರಿಗಳು, ಬಣ್ಣಗಳು, ವಾಹನಗಳು ಇತರೆ ಚಿತ್ರಗಳನ್ನು / ಭಾಗಗಳನ್ನು ಗುರುತಿಸಿ) ಹೆಸರುಗಳನ್ನು ದಾಖಲಿಸದೇ ಖಾಲಿ ಬಿಟ್ಟು ಸೂಕ್ತ ಆಂಗ್ಲ / ಹಿಂದಿ ಪದಗಳನ್ನು ಆಯ್ದು ಆ ಖಾಲಿ ಜಾಗದಲ್ಲಿ ಜೋಡಿಸಲು ತಿಳಿಸುವ ಚಟುವಟಿಕೆ ನಿರ್ವಹಿಸುವುದು. ಇದರಿಂದ ವಿದ್ಯಾರ್ಥಿಗಳಿಗೆ ಆಂಗ್ಲ / ಹಿಂದಿ ಭಾಷಾ ಪದಗಳ ಬಳಕೆಯು ಸುಲಲಿತವಾಗುತ್ತದೆ.

2. **ಶಾಲಾ ಹಂತದ ಕ್ಲಬ್‌ಗಳ ರಚನೆ:-** ಶಾಲೆಯಲ್ಲಿ ವಿವಿಧ ವಿಷಯಗಳ ಕುರಿತ ಕ್ಲಬ್‌ಗಳ ರಚನೆ, ಇಕೋ ಕ್ಲಬ್, ಮೀನಾ ಕ್ಲಬ್, ಸಾಹಿತ್ಯ, ವಿಜ್ಞಾನ, ಕ್ರೀಡಾ, ಸಾಂಸ್ಕೃತಿಕ ವಿಷಯವಾರು ಕ್ಲಬ್‌ಗಳು, ಎನ್.ಎಸ್.ಎಸ್., ಎನ್.ಸಿ.ಸಿ. ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ ಇತರೆ ಕ್ಲಬ್‌ಗಳ ನಿರ್ವಹಣೆ ಮಾಡುವುದರೊಂದಿಗೆ ಶೈಕ್ಷಣಿಕ ಸ್ಪರ್ಧೆಗಳನ್ನು ಏರ್ಪಡಿಸಿ ಗುಣಮಟ್ಟದ ಕಲಿಕೆಗೆ ಪ್ರೋತ್ಸಾಹಿಸುವುದು.
3. **ನಮ್ಮೂರವರು:-** ಸ್ಥಳೀಯ ಗ್ರಾಮದಲ್ಲಿನ ಹಳೆಯ ವಿದ್ಯಾರ್ಥಿಗಳು / ಸಾಧಕರುಗಳ ಕುರಿತ ಪ್ರಾಜೆಕ್ಟ್ ಮಾಡಿಸಿ ಹಳೆಯ ವಿದ್ಯಾರ್ಥಿಗಳ/ ಸಾಧಕರುಗಳ ಕುರಿತ ಮಾಹಿತಿ ಸಂಗ್ರಹಿಸಲು ಹೇಳಿ ಪ್ರಾಜೆಕ್ಟ್ ಮಾಡಿಸಿ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿಸುವುದು.
4. **ಶಾಲೆಯ ಹೆಜ್ಜೆ ಗುರುತು:-** ಶಾಲಾ ವಿಶೇಷತೆ ಮತ್ತು ಯಶೋಗಾಥೆಗಳನ್ನು ಶಾಲಾ ವಾರ್ಷಿಕ ಸಂಚಿಕೆ, ಶಾಲಾ ವಾರ್ಷಿಕ ಆಲ್ಬಂ ನಂತಹ ದಾಖಲೆಗಳಲ್ಲಿ ನಿರ್ವಹಣೆ ಮಾಡುವುದು.
5. **ಕಲಿಕೋತ್ಸವ:-** ಶಾಲಾ ಹಂತದಲ್ಲಿ ಪಠ್ಯಾಧಾರಿತ ತರಗತಿವಾರು ಚಟುವಟಿಕೆಗಳನ್ನು ನೃತ್ಯ, ಸಂಭಾಷಣೆ, ಛದ್ಮ ವೇಷ, ವಿವಿಧ ವೇಷ ಭೂಷಣಗಳೊಂದಿಗೆ ಅಭಿನಯಿಸುವುದರೊಂದಿಗೆ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಅನಾವರಣಗೊಳಿಸುವುದಾಗಿದೆ. ಇದು ಕೇವಲ ಶೈಕ್ಷಣಿಕ ಪಠ್ಯಾಧಾರಿತ ಕಾರ್ಯಕ್ರಮವೇ ಹೊರತು ಮನರಂಜನಾ ಕಾರ್ಯಕ್ರಮವಲ್ಲ.
6. **ಅನುಭವ ಹಂಚಿಕೆ ಕಾರ್ಯಾಗಾರ:-** ಅನುಭವ ಹಂಚಿಕೆ ಕಾರ್ಯಕ್ರಮಗಳು, ಅಂತರ ಶಾಲೆ / ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರ ಸಮ್ಮೇಳನ / ಸಮಾಲೋಚನೆ, ಶಾಲಾ ಸಂದರ್ಶನವನ್ನು ಪರಸ್ಪರ ಮುಖ್ಯ ಶಿಕ್ಷಕರುಗಳು ತಮ್ಮ ಶಾಲಾ ಹಂತಗಳಲ್ಲಿ ಏರ್ಪಡಿಸಿ, ಅನುಭವಿ ಮತ್ತು ಅನನುಭವಿ ಶಿಕ್ಷಕರುಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದರೊಂದಿಗೆ ಗುಣಬಲವರ್ಧನೆಗೆ ಒತ್ತು ನೀಡಿದಂತಾಗುವುದು.
7. **ಚಿಣ್ಣರ ಲೋಕ:-** ನಲಿ-ಕಲಿ ಮತ್ತು ಕಿರಿಯ ಪ್ರಾಥಮಿಕ ವಿಭಾಗದ ವಿದ್ಯಾಥಿ ಗಳಿಗೆ ಸ್ಥಳೀಯರ ಸಹಕಾರದೊಂದಿಗೆ ವಿಶೇಷ ಸಮವಸ್ತ್ರ, (ಟೈ, ಬೆಲ್ಟ್, ಶೂ, ಹೇರ್‌ಬ್ಯಾಂಡ್ ಇತರೆ) ಹೊಂದಲು ಪ್ರೇರೇಪಿಸುವುದರೊಂದಿಗೆ ಆಕರ್ಷಣೀಯಗೊಳಿಸುವುದು.
8. **ಗ್ರಾಮೋತ್ಸವ:-** ಸಮುದಾಯ/ಸ್ವಯಂ ಸೇವಾ ಸಂಘಟನೆಗಳು, ಸ್ಥಳೀಯ ಸಹಕಾರದೊಂದಿಗೆ ತಮ್ಮ ಶಾಲೆ ಇರುವ ಗ್ರಾಮದ ಪಾಲಕ, ಪೋಷಕರು, ಜನಪ್ರತಿನಿಧಿಗಳು, ಇತರೆ ಎಲ್ಲರನ್ನೂ ಶಾಲೆಗೆ ಆಹ್ವಾನಿಸಿ ಸಾರ್ವಜನಿಕರಿಗೆ (ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ವಿವಿಧ ಸ್ಪರ್ಧೆಗಳನ್ನು, ಶಾಲಾ ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಪ್ರದರ್ಶನ ಏರ್ಪಡಿಸಿ ಸಂಪೂರ್ಣ ಒಂದು ದಿನ ಗ್ರಾಮಸ್ಥರನ್ನು ಶಾಲೆಯತ್ತ ಆಕರ್ಷಿಸುವುದು.
9. **ಬಹುಪಯೋಗಿ ಕೊಠಡಿ (Multi purpose classroom):- ವಿವಿಧೋದ್ದೇಶ ಕೊಠಡಿ:-**ಕಡಿಮೆ ವಿದ್ಯಾರ್ಥಿಗಳು ದಾಖಲಾತಿ ಇರುವ ಶಾಲೆಯ ಒಂದು ಕೊಠಡಿಯಲ್ಲಿ ಸುತ್ತಲೂ ಕಲ್ಲಿನ ಬೆಂಚು ಮತ್ತು ಟೇಬಲ್ ಮಾಡಿಸುವುದು (ಡೆಸ್ಕ್ ಮಾದರಿಯಲ್ಲಿ) ಮಧ್ಯದಲ್ಲಿ ಒಂದು ತಾತ್ಕಾಲಿಕವಾದ ಪ್ರಾತ್ಯಕ್ಷಿಕೆಗೆ ಸಹಾಯವಾಗುವಂತೆ ಲಾಂಗ್ ಟೇಬಲ್ ಮಾಡಿಸುವುದು. ಇದು ಅಪರಾಹ್ನ ಸಮಯದಲ್ಲಿ ಭೋಜನಾಲಯ, ಇತರೆ ಸಮಯದಲ್ಲಿ ವಾಚನಾಲಯ, ಪ್ರಯೋಗಾಲಯ ಮತ್ತು ಇತರೆ ಶೈಕ್ಷಣಿಕ ಮತ್ತು

ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲು ಸಹಕಾರಿಯಾಗುತ್ತದೆ. ಈ ಮೇಲ್ಕಂಡವುಗಳು ಸಲಹಾತ್ಮಕ ಮಾತ್ರ ಸಂಪನ್ಮೂಲ ಆಧರಿಸಿ ನಿರ್ವಹಿಸುವುದು.

10. **ಗಣಿತ ಪಾರ್ಕ್:-** ಶಾಲಾ ವನದಲ್ಲಿ ಗಿಡಗಳನ್ನು ಮತ್ತು ಅವುಗಳ ಪಾತಿಯನ್ನು ವಿವಿಧ ರೇಖಾಕೃತಿಯಲ್ಲಿ ನಿರ್ಮಿಸಿ ವಿವಿಧ ಬಣ್ಣಗಳಿಂದ ಆಕರ್ಷಣೀಯಗೊಳಿಸುವುದರೊಂದಿಗೆ ಪ್ರತಿನಿತ್ಯ ವಿದ್ಯಾರ್ಥಿಗಳಿಗೆ ರೇಖಾಕೃತಿಗಳ ಪರಿಚಯ ಮಾಡಿಸುವುದು.
11. **ಶುಭೋದಯ:-** ಪ್ರಾರ್ಥನಾ ಸಮಯದಲ್ಲಿ ದಿನದ ವಿಶೇಷತೆ, ವಾರ್ತೆಗಳು, ಸೂಕ್ತಿಗಳೊಂದಿಗೆ ತರಗತಿಗೊಂದು ರಸಪ್ರಶ್ನೆಯನ್ನು ದಿನಕ್ಕೊಂದು ವಿಷಯದ ಮೇಲೆ ಮಾಡಿಸುವುದು.
12. **ಸ್ವಚ್ಛ ಶಾಲೆ:-** ಪ್ರತಿ ಶಾಲೆಯಲ್ಲಿ **"ತಂಬಾಕು ಮುಕ್ತ ಶಾಲೆ"** ಎಂದು ಫಲಕ ಬರೆಸಿ ಪ್ರದರ್ಶಿಸುವುದು. "ಸ್ವಚ್ಛ ಭಾರತ ಸ್ವಚ್ಛ ವಿದ್ಯಾಲಯ" ಕಾರ್ಯಕ್ರಮದಡಿ ಪ್ರತಿ ದಿನ ಬೆಳಗ್ಗೆ ಪ್ರಾರ್ಥನಾ ಸಮಯಕ್ಕೆ ಮುನ್ನ 10 ನಿಮಿಷ ಹಾಗೂ ಪ್ರತಿ ಶನಿವಾರ ಒಂದು ಅವಧಿಯಲ್ಲಿ ಶಾಲಾ ಆವರಣ, ಶಾಲಾವನ ಸ್ವಚ್ಛಗೊಳಿಸಿಸುವುದು.
13. **ಬಹುಪಯೋಗಿ ನೋಟ್‌ಬುಕ್:-** 200 ಪುಟಗಳ ನೋಟ್‌ಬುಕ್ ಒಂದನ್ನು ಶಾಲೆಯಲ್ಲಿಯೇ ಪ್ರತಿ ತರಗತಿ ವಿದ್ಯಾರ್ಥಿಗೆ ಇಡಿಸಿ ಅದರಲ್ಲಿ ಅವರ ಪ್ರಾಜೆಕ್ಟ್ ವರ್ಕ್, ಕಥೆ, ಕವನ, ಚಿತ್ರಕಲೆ, ಸಂಗೀತ, ವಿವಿಧ ಸ್ಪರ್ಧೆಗಳು, ಪಠ್ಯೇತರ  ಚಟುವಟಿಕೆಗಳು, ಪ್ರವಾಸ ಕಥನ, ಸಿ.ಸಿ.ಇ., ಅಡಿ ನಿರ್ವಹಿಸುವ ಚಟುವಟಿಕೆಗಳ ಕುರಿತಂತೆ ದಾಖಲಿಸಿಲು ತಿಳಿಸುವುದು. ಅಂತಿಮವಾಗಿ ಅವರಿಗೇ ನೀಡುವುದು, ಇದರಿಂದಾಗಿ ಇತರೆ ಶಾಲೆಗಳಂತೆ ಸರ್ಕಾರಿ ಶಾಲೆಗಳಲ್ಲೂ ಕ್ರಿಯಾಶೀಲ ಚಟುವಟಿಕೆಗಳನ್ನು ಆಯೋಜಿಸಿ ದಾಖಲೀಕರಣಕ್ಕಾಗಿ ಪಾಲಕರು ಪ್ರೋತ್ಸಾಹಿಸುವಂತಾಗುತ್ತದೆ.
14. **ಕಲಿಯೋಣ ಬಾರಾ:-** ಶಾಲೆಯಿಂದ ಹೊರಗುಳಿದ ಮತ್ತು ನಿರಂತರ ಗೈರಾಗುವ, ಅತೀ ಕಡಿಮೆ ಕಲಿಕಾ ಸಾಧನೆ ಮಾಡುವ ಮಕ್ಕಳನ್ನು ಶಾಲೆಗೆ ಆಕರ್ಷಿಸಲು ಒಬ್ಬ ಸ್ಥಳೀಯ ಶಿಕ್ಷಕರನ್ನು ನೇಮಿಸಿಕೊಂಡು (ಉಚಿತ / ಸ್ಥಳೀಯವಾಗಿ ಗೌರವಧನ ಪಾವತಿಸಿ) ಪ್ರತಿದಿನ ಅವರು ಮನೆ-ಮನೆಗೆ ತೆರಳಿ ಈ ಮಕ್ಕಳನ್ನು ಶಾಲೆಗೆ ಕರೆತಂದು ಪ್ರತ್ಯೇಕ ಕೊಠಡಿಯಲ್ಲಿ (ಕಲಿಯೋಣ ಬಾರಾ) ಕನಿಷ್ಠ ಸಾಮರ್ಥ್ಯಗಳನ್ನು ಕಲಿಸುವುದು. ನಂತರ ಅವರವರ ಸಾಧನೆಯನ್ನಾಧರಿಸಿ ಮುಖ್ಯವಾಹಿನಿಗೆ ತರಬಹುದಾಗಿದೆ.
    ಇದರಿಂದಾಗಿ ವೃತ್ತಿ ನಿರತ ಶಿಕ್ಷಕರಿಗೆ ಹೊರೆ ಕಡಿಮೆಗೊಳಿಸಿದಂತಾಗುತ್ತದೆ. (ಶಾಲೆಯಲ್ಲಿ ಕನಿಷ್ಟ 10 ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳು ಲಭ್ಯವಿರುವೆಡೆ ಪ್ರಾರಂಭಿಸಬಹುದಾಗಿದೆ).
15. **ಶೈಕ್ಷಣಿಕ ಮೇಲ್ವಿಚಾರಣಾ ಡೈರಿ:-** ಎಲ್ಲಾ ಹಂತದ ಮಾರ್ಗದರ್ಶಕ ಅಧಿಕಾರಿಗಳು / ಸಿಬ್ಬಂದಿಗಳು ಆಯಾ ತಿಂಗಳಲ್ಲಿ ಶಾಲೆಗಳಲ್ಲಿ ಮಾಡಬೇಕಾದ ವಾರ್ಷಿಕ ಪಾಠ ಹಂಚಿಕೆಯ ಹಾಗೂ ವಾರ್ಷಿಕ ಕ್ರಿಯಾಯೋಜನೆಯಂತೆ ಶಿಕ್ಷಕರು ಅನುಪಾಲನೆ ಮಾಡುತ್ತಿದ್ದಾರೆಯೇ? ಹಾಗೂ ಸಂದರ್ಭಕ್ಕನುಸಾರವಾಗಿ ಬೋಧನೆಯಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಸಲಹೆಯನ್ನು ನೀಡಲು ಮತ್ತು ವಿದ್ಯಾರ್ಥಿಗಳ ಪ್ರಗತಿಯನ್ನು ತರಗತಿ ಕೋಣೆಯಲ್ಲಿ ಅವಲೋಕಿಸಲು ಸಹಾಯವಾಗುವಂತೆ ವಾರ್ಷಿಕ ಪಾಠ ಹಂಚಿಕೆಗೆ ಅನುಗುಣವಾಗಿ ಸಂದರ್ಶನ ಮಾಹೆಗೆ ಸೀಮಿತಗೊಳಿಸಿದ ಪಠ್ಯ ವಸ್ತುವಿನ ವಿಷಯವಾರು ತಯಾರಿಸಿಕೊಂಡ ಪ್ರಶ್ನೋತ್ತರ ಮಾಲಿಕೆಯೊಂದಿಗೆ ಶಾಲಾ ಮೇಲ್ವಿಚಾರಣೆಗಾಗಿ ಉತ್ತಮ ಪೂರ್ವ ತಯಾರಿಯೊಂದಿಗೆ ಶಾಲಾ ಸಂದರ್ಶನಕ್ಕೆ ಕ್ರಮವಹಿಸಿ ಶೈಕ್ಷಣಿಕ ಮಾರ್ಗದರ್ಶನ ನೀಡುವುದು.
16. **ಮಕ್ಕಳ ಹಬ್ಬ:-** ಪ್ರತಿ ವರ್ಷಕ್ಕೊಮ್ಮೆ ಶಾಲಾ ಹಂತದಲ್ಲಿ ಮೆಟ್ರಿಕ್ ಮೇಳ, ಮಕ್ಕಳ ಸಂತೆ, ಪ್ರಾದೇಶಿಕ ನೃತ್ಯ, ಕಲೆ ಆಧಾರಿತ ಸ್ಪರ್ಧೆಗಳ ಆಯೋಜನೆ , ಮಕ್ಕಳ ಕವಿ ಗೋಷ್ಟಿ (ಮಕ್ಕಳ ಸಾಹಿತ್ಯ ಸಮ್ಮೇಳನ) ಹಾಗೂ ವಿಶೇಷ ಸಾಧನೆಗೈದ ಮಕ್ಕಳ ಫೋಟೋ ಮತ್ತು ವಿವರ ಪ್ರಕಟಿಸುವುದು, ಮಕ್ಕಳ ಪ್ರಾಜೆಕ್ಟ್ ಮತ್ತು ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ, ಬೋಧನಾ ತಂತ್ರಗಾರಿಕೆ/ಪ್ರಾತ್ಯಕ್ಷಿಕೆ ಇತರೆಗಳಿಗೆ ಪಾಲ್ಗೊಳ್ಳುವಂತೆ ಕಾರ್ಯಕ್ರಮವನ್ನು ಆಯೋಜಿಸಿ ಪ್ರೇರೇಪಿಸುವುದು.

17. **ಇ-ಕಲಿಕಾ ಕೇಂದ್ರ ಸ್ಥಾಪನೆ:-** ಪ್ರತಿ ಶಾಲೆಯಲ್ಲಿ ಲಭ್ಯ ಅನುದಾನ ಬಳಸಿ ಮತ್ತು ಸಾರ್ವಜನಿಕರ ಸಹಕಾರದೊಂದಿಗೆ "ಇ-ಕಲಿಕಾ ಕೇಂದ್ರ" ಪ್ರಾರಂಭಿಸುವುದು. ಅಂದರೆ ಪ್ರೊಜೆಕ್ಟರ್, ಕ್ಯಾಮರಾ, ಸ್ಕ್ರೀನ್, ಕಂಪ್ಯೂಟರ್, ಲ್ಯಾಪ್ ಟಾಪ್ ಅಳವಡಿಸಿ ಒಂದು ಕೊಠಡಿಯನ್ನು ಆಡಿಯೋ-ವೀಡಿಯೋ ಥಿಯೇಟರ್ ಆಗಿ ಪರಿವರ್ತಿಸಿ ಬೋಧನಾ / ಕಲಿಕಾ ದೃಶ್ಯಾವಳಿಗಳು, ಕ್ರಾಫ್ಟ್, ಮನರಂಜನಾ ಚಟುವಟಿಕೆಗಳು ವಿವಿಧ ಸ್ಲೈಡ್‌ಗಳು, ಶಾಲೆಯಲ್ಲಿ ಕೈಗೊಂಡ ಕಾರ್ಯಕ್ರಮಗಳು, ಅಂತರ್ಜಾಲ ವ್ಯವಸ್ಥೆಯನ್ನು ಕಲ್ಪಿಸುವುದರೊಂದಿಗೆ ವಿಶ್ವಕೋಶವನ್ನು ಪರಿಚಯಿಸುವುದು. ಹೀಗೆ ಇತರ ಕೌಶಲ್ಯಗಳನ್ನು ವಿದ್ಯಾಥಿ ಗಳಿಗೆ ಪ್ರಾತ್ಯಕ್ಷಿಸುತ್ತಾ ಕಲಿಯುವಂತೆ ಪ್ರೇರೇಪಿಸಲು ಮತ್ತು ವೀಕ್ಷಿಸಲು ಸಹಾಯವಾಗುವಂತೆ ಅಳವಡಿಸುವುದು. ಶಾಲೆಯಲ್ಲಿ ಅನುದಾನ ಲಭ್ಯವಿಲ್ಲದಿದ್ದಲ್ಲಿ ಸ್ಥಳೀಯ ದಾನಿಗಳಿಂದ ಅಳವಡಿಸಿ ಅದಕ್ಕೆ ಅವರ ಹೆಸರನ್ನು ನಾಮಕರಣ ಮಾಡಲು ನಿಯಮಾನುಸಾರ ಕ್ರಮವಹಿಸುವುದು. ಇದನ್ನು ಅಗತ್ಯಾನುಸಾರ ಆನ್‌ಲೈನ್ ತರಗತಿ ನೀಡಲು ಬಳಸಿಕೊಳ್ಳಬಹುದಾಗಿದೆ.
18. **ನೆರವು:-** ಬಡ ಮಕ್ಕಳಿಗೆ, ಶೋಷಿತ ಮಕ್ಕಳಿಗೆ ಹಾಗೂ ಸಮಾಜ ನಿರ್ಲಕ್ಷಿತ ಕಟ್ಟ ಕಡೆಯ ಮಗುವಿನ ಶೈಕ್ಷಣಿಕ ಪೂರೈಕೆಗಾಗಿ (ವ್ಯಾಸಂಗದ ಸಹಾಯಕ್ಕಾಗಿ) ಸ್ಥಾಪಿಸಿದ ದತ್ತಿ ನಿಧಿ ಅಥವಾ ದಾನಿಗಳ ಪ್ರಾಯೋಜಕತ್ವದಲ್ಲಿ ಸ್ಥಾಪಿಸಿದ ಕ್ಲಬ್. ಇದರಿಂದ ಪ್ರತಿ ವರ್ಷ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಾಧನೆಗೈದ [Rank ಪಡೆದ] ಎಸ್.ಎಸ್.ಎಲ್.ಸಿ / ಪಿ.ಯು.ಸಿ ವಿದ್ಯಾರ್ಥಿ / ವಿದ್ಯಾರ್ಥಿನಿಗೆ ಅಗತ್ಯಾನುಸಾರ ಭವಿಷ್ಯದ ವ್ಯಾಸಂಗಕ್ಕೆ ಸಹಕರಿಸಿ ಬಲವರ್ಧನೆಗೊಳಿಸುವುದಾಗಿದೆ.
19. **ಪ್ರಯೋಗ ಕಿರಣ:-** 5, 6, 7 ಮತ್ತು 8 ನೇ ತರಗತಿಗಳಲ್ಲಿನ ವಿಜ್ಞಾನ ಪಠ್ಯ ವಸ್ತುವಿನಲ್ಲಿನ ಅಧ್ಯಾಯವಾರು ಪ್ರಯೋಗಗಳನ್ನು ಮಾಡುವ ಬಗ್ಗೆ ಅಂದರೆ, ಪ್ರಯೋಗದ ಹೆಸರು, ಪ್ರಯೋಗ ಮಾಡಲು ಬೇಕಾಗುವ ಸಾಮಗ್ರಿಗಳ ಚಿತ್ರ ಸಮೇತ, ಪ್ರಯೋಗ ಮಾಡುವ ವಿಧಾನ ಮತ್ತು ಬೇಕಾಗುವ ರಾಸಾಯನಿಕಗಳು ಅಂತಿಮವಾಗಿ ಪ್ರಯೋಗದ ವೈಜ್ಞಾನಿಕ ಮಹತ್ವವನ್ನು ಬಿಂಬಿಸುವಂತೆ ಒಂದು ಪುಟದಲ್ಲಿ ಪ್ರಯೋಗದ ಫೋಟೋದೊಂದಿಗೆ ಮಾಹಿತಿ ದಾಖಲಿಸಿ ತರಗತಿವಾರು ಕ್ರೋಢೀಕರಿಸುವುದು ಹಾಗೂ ಪೂರಕವಾಗಿ ವೈಜ್ಞಾನಿಕ ಕೌತುಕಗಳು, ಮೂಢನಂಬಿಕೆಗಳಿಗೆ ವೈಜ್ಞಾನಿಕ ವಿಶ್ಲೇಷಣೆ ಮತ್ತು ಪವಾಡ ಗುಟ್ಟು ಬಯಲಿನಂತಹ ಚಟುವಟಿಕೆಗಳನ್ನು ದಾಖಲಿಸಿ ಕೈಪಿಡಿ ತಯಾರಿಸುವುದು. ವಿದ್ಯಾರ್ಥಿಗಳಿಗೆ ವರ್ಷದಲ್ಲಿ ಒಂದು ದಿನ (ವಿಜ್ಞಾನ ದಿನ) ವೈಜ್ಞಾನಿಕ ಮೇಳವನ್ನು ಆಯೋಜಿಸಿ ಇದರಲ್ಲಿ ವಿದ್ಯಾರ್ಥಿಗಳಿಂದ ವಿಜ್ಞಾನ ರಂಗೋಲಿ, ವಿಜ್ಞಾನ ವಸ್ತು ಪ್ರದರ್ಶನ, ಮೂಢನಂಬಿಕೆಗಳು, ವಿಜ್ಞಾನ ರಸಪ್ರಶ್ನೆ ಆಯೋಜಿಸಿ ಅದರಲ್ಲಿ ಪ್ರಯೋಗದ ಸುತ್ತಿನಲ್ಲಿ ಪ್ರಶ್ನಾವಳಿ ಅಳವಡಿಸುವುದು ಮತ್ತು ವೈಜ್ಞಾನಿಕ ವಿಶ್ಲೇಷಣೆ ಹಾಗೂ ಪವಾಡ ಗುಟ್ಟು ಬಯಲಿನಂತಹ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಂದಲೇ ಮಾಡಿಸುವುದರಿಂದ ಭವಿಷ್ಯದ ವಿಜ್ಞಾನಿಗಳನ್ನು ರೂಪಿಸಿದಂತಾಗುತ್ತದೆ. ಈ ಪ್ರಯೋಗ ಕಿರಣ ಮತ್ತು ಪೂರಕ ಚಟುವಟಿಕೆಗಳನ್ನು ಕ್ಲಸ್ಟರ್ ನಲ್ಲಿನ ವಿಜ್ಞಾನ ಶಿಕ್ಷಕರ ಸಂಪನ್ಮೂಲ ತಂಡ ತಯಾರಿಸಿ, ಆಯೋಜಿಸಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವುದಾಗಿದೆ.

**ವಿಷಯವಾರು ಕಲಿಕಾ ಕಾರ್ನರ್‌ಗಳನ್ನು ಅಳವಡಿಸುವುದು:-** ಆಯಾ ತರಗತಿಯ ವಿಷಯ ಬೋಧನೆಗೆ ಪೂರಕವಾದ ಟಿ.ಎಲ್.ಎಂ. ಗಳನ್ನು, ಗ್ರಂಥಾಲಯದ ಪುಸ್ತಕಗಳನ್ನು, ಚಾರ್ಟ್ ಗಳನ್ನು ಒಂದು ತರಗತಿ ಕೋಣೆಯಲ್ಲಿ ಒಂದು ವಿಷಯಕ್ಕೆ ಸೀಮಿತಗೊಳಿಸಿ, ಆ ವಿಷಯದ ಕಲಿಕಾ ಕಾರ್ನರ್ ಎಂದು ಹೆಸರಿಸಿ ವ್ಯವಸ್ಥೆಗೊಳಿಸುವುದು. ಉದಾ:- ವಿಷಯವಾರು ಗಣಿತ, ವಿಜ್ಞಾನ, ಸಮಾಜ, ಇಂಗ್ಲೀಷ್ ಕಲಿಕಾ ಕಾರ್ನರ್ ಎಂದು ಒಂದೊಂದು ತರಗತಿ ಕೊಠಡಿಗಳನ್ನು [4, 5, 6, 7 ಮತ್ತು 8ನೇ ತರಗತಿ ಕೊಠಡಿಗಳಲ್ಲಿ ನಿಗದಿಪಡಿಸಿ] ಸಂಬಂಧಿಸಿದ ವಿಷಯ ಶಿಕ್ಷಕರು ಅದೇ ವಿಷಯದ ಕಲಿಕಾ ಕಾರ್ನರ್‌ನಲ್ಲಿ ಇದ್ದು, ವಿದ್ಯಾರ್ಥಿಗಳನ್ನು ಪಾಳಿ ಪದ್ಧತಿಯಲ್ಲಿ ಆಯಾ ತರಗತಿ ವಿಷಯದ ಬೋಧನಾ ಕಲಿಕಾ ಪ್ರಕ್ರಿಯೆಗೆ ಕರೆಸಿ ಬೋಧಿಸುವುದು. ಇದರಿಂದಾಗಿ,

ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಷಯದ ಪೂರ್ಣ ಜ್ಞಾನದ ಪರಿಚಯವಾಗುತ್ತದೆ. ಶಿಕ್ಷಕರಿಗೂ ಆಯಾ ವಿಷಯದ ಬೋಧನೋಪಕರಣಗಳು ಸ್ಥಳದಲ್ಲೇ ಬಳಕೆಗೆ ಸಹಾಯವಾಗುವುದರಿಂದ ಬೋಧನೆ ಪರಿಣಾಮಕಾರಿಯಾಗುತ್ತದೆ. (ಉದಾ:- ಪದವಿ ಕಾಲೇಜುಗಳಲ್ಲಿ ವಿಷಯವಾರು ಪ್ರಯೋಗಾಲಯಗಳು ಇದ್ದಂತೆ). ಇದರ ಸಿದ್ಧತೆಗೆ ಆಯಾ ವಿಷಯ ಶಿಕ್ಷಕರಿಗೆ ಜವಾಬ್ದಾರಿ ನೀಡುವುದು.

20. **ಶಾಲಾ ಧ್ವನಿ:-** ಪ್ರತಿ 15 ದಿನಗಳಿಗೊಮ್ಮೆ ಮತ್ತು ಶಾಲಾ ಹಬ್ಬಗಳ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳಿಗೆ ಗಾಯನ ಸ್ಪರ್ಧೆ, ಭಾಷಣ, ಕಲೆ, ಸಾಹಿತ್ಯ, ಚರ್ಚಾಸ್ಪರ್ಧೆ, ವಿಚಾರ ಗೋಷ್ಠಿ, ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸುವುದು.

21. **ಶಾಲಾ ಮ್ಯೂಸಿಯಂ:-** ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಪ್ರಾದೇಶಿಕ ಪ್ರಸಿದ್ಧ ಸ್ಥಳಗಳ ಕುರಿತ ಕಲೆ, ಸಾಹಿತ್ಯ, ಜಾನಪದ, ಕ್ರೀಡೆ, ಸಾಂಸ್ಕೃತಿಕ ಮೌಲ್ಯಗಳ ಕುರಿತು ಚರ್ಚೆ, ಫೋಟೋಗಳು, ಸಾಮಾಗ್ರಿಗಳ ಸಂಗ್ರಹಣೆ, ಶಾಲೆಯ ವಿಶೇಷತೆಗಳು, ಯಶೋಗಾಥೆಗಳು, ಶಾಲೆಯ ಹಳೆಯ ಸಾಧಕ ವಿದ್ಯಾರ್ಥಿಗಳ ಕುರಿತ ವಿವರಗಳು, ವಿವಿಧ ಪ್ರಾಜೆಕ್ಟ್ ಗಳು ಹಾಗೂ ವಿದ್ಯಾರ್ಥಿಗಳ ಸಾಧನೆಗಳನ್ನು ಸಂಗ್ರಹಿಸಿ ಶಾಲೆಯ ಒಂದು ಭಾಗದಲ್ಲಿ ಕ್ರೋಢೀಕರಿಸಿ ಪ್ರದರ್ಶಿಸುವುದು.

22. **ಶೈಕ್ಷಣಿಕೋತ್ಸವ:-** ಶೈಕ್ಷಣಿಕ ವರ್ಷದ ಕೊನೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಶಿಕ್ಷಕರುಗಳಿಗೆ ಪ್ರೋತ್ಸಾಹದಾಯಕವಾಗಿ ಹಲವು ಸ್ಪರ್ಧೆಗಳನ್ನು, ಟಿ.ಎಲ್.ಎಂ. ಮೇಳ, ಇ-ಕಲಿಕೋತ್ಸವ, ಗುಣಾತ್ಮಕ ಶಾಲೆ, ಶಿಕ್ಷಕರ ಸಾಂಸ್ಕೃತಿಕ ಸಂಜೆಯಂತಹ ಚಟುವಟಿಕೆಗಳನ್ನು ಆಯೋಜಿಸಿ ಪ್ರೋತ್ಸಾಹಿಸುವುದು.

23. **ವಿದ್ಯಾರ್ಥಿಗಳ ಶಿಕ್ಷಣ ಅದಾಲತ್:-** ಕ್ಲಸ್ಟರ್ ಹಂತದಿಂದ ಜಿಲ್ಲಾ ಹಂತದವರೆಗೆ ವಿದ್ಯಾರ್ಥಿಗಳಿಗೆ ಕಲಿಕಾ ಕ್ಲಿಷ್ಟಾಂಶಗಳನ್ನು ಅರ್ಥೈಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ಶಿಕ್ಷಕರೊಂದಿಗೆ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಆಯೋಜಿಸುವುದರಿಂದ ವಿದ್ಯಾರ್ಥಿಗಳಲ್ಲಿ ಕಲಿಕಾ ಸಂದೇಹಗಳನ್ನು ನಿವಾರಿಸಿಕೊಳ್ಳಲು ಸಹಾಯವಾಗುತ್ತದೆ.

ಈ ಮೇಲ್ಕಂಡಂತೆ ಶಾಲಾ ಹಂತದಲ್ಲಿ ಸಿ.ಸಿ.ಇ., ಮೌಲ್ಯಂಕನ ವಿಶ್ಲೇಷಣೆಗೆ ಸಹಾಯವಾಗುವಂತೆ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಂಡು ಸಂಘಟಿಸಿ ಶ್ರೇಣೀಕರಿಸಬಹುದಾಗಿದೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿ ಹದಿನೈದು ದಿನಗಳಿಗೊಮ್ಮೆ [ಶನಿವಾರಗಳಂದು] ಆಯೋಜಿಸಿ ಶಾಲೆಯನ್ನು ಆಕರ್ಷಣೀಯ ಸಂತಸ ಕಲಿಕಾ ಕೇಂದ್ರವಾಗಿಸಿ ಗುಣಮಟ್ಟದ ಶಿಕ್ಷಣವನ್ನು ಕಾಯ್ದುಕೊಳ್ಳಲು ಸಲಹಾತ್ಮಕವಾಗಿ ನೀಡಲಾಗಿದೆ. ಪ್ರಯುಕ್ತ ಶೈಕ್ಷಣಿಕ ಹಿತದೃಷ್ಟಿಯಿಂದ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.